ನಟರಾಜ್ ಹುಳಿಯಾರ್

# ಕವಿ ಸಿದ್ಧಲಿಂಗಯ್ಯ ಕನ್ನಡ ಸಂಸ್ಕೃತಿಯ ಅಪೂರ್ವ ಆಸ್ಫೋಟ

**ಡಾ. ಸಿದ್ಧಲಿಂಗಯ್ಯ (3.2.1954 – 11.6.2021) ಕನ್ನಡ ಸಾಹಿತ್ಯ, ಸಂಸ್ಕೃತಿ, ಚಳುವಳಿ, ಸಮಾಜ ಎಲ್ಲದರ ಮೇಲೂ ಅನನ್ಯ ಪ್ರಭಾವ ಬೀರಿದ ಕವಿ. ಕಾಲದ ಹಲಬಗೆಯ ವಿದ್ಯಮಾನಗಳ ಫಲವಾಗಿಯೂ ರೂಪುಗೊಂಡ ಅವರು ಇಪ್ಪತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಮೂಡಿದ ಕನ್ನಡದ ಅತ್ಯಂತ ಪ್ರಭಾವಶಾಲಿ ಕವಿ ಹಾಗೂ ವಿಶಿಷ್ಟ ಸಾಂಸ್ಕೃತಿಕ ನಾಯಕರು. ಅವರ ಕಾವ್ಯ, ಚಿಂತನೆಗಳ ಆರೋಗ್ಯಕರ ಪ್ರಭಾವ ಎಲ್ಲ ಕಾಲಕ್ಕೂ ಈ ನಾಡಿಗೆ ಅಗತ್ಯ...**

## ಸ್ಫೋಟಕ ಪ್ರತಿಭೆಯ ಮೊದಲ ಮಿಂಚು

ಸುಮಾರು ಅರವತ್ತು ವರ್ಷಗಳ ಕೆಳಗೆ ಬೆಂಗಳೂರಿಗೆ ಐವತ್ತು ಕಿಲೋಮೀಟರ್ ದೂರದಲ್ಲಿರುವ ಮಾಗಡಿ ಬಳಿಯ ಐನೋರ ಹೊಲವನ್ನು ಇಬ್ಬರು ಗಂಡಾಳುಗಳು ನೇಗಿಲ ನೊಗ ಹೊತ್ತು ಎತ್ತುಗಳಂತೆ ಉಳುತ್ತಿದ್ದರು. ಈ ದೃಶ್ಯವನ್ನು ದಲಿತಕೇರಿಯ ಪುಟ್ಟ ಹುಡುಗರು ತಮಾಷೆಯೆಂಬಂತೆ ನೋಡುತ್ತಿದ್ದರು. ಆ ಇಬ್ಬರಲ್ಲಿ ತನ್ನ ಅಪ್ಪ ದೇವಯ್ಯನೂ ಇರುವುದನ್ನು ಕಂಡ ಆ ಗುಂಪಿನಲ್ಲಿದ್ದ ಹುಡುಗ ಸಿದ್ಧಲಿಂಗಯ್ಯನಿಗೆ ವಿಚಿತ್ರ ಸಂಕಟ ಶುರುವಾಯಿತು.

ಕೆಲ ವರ್ಷಗಳ ನಂತರ ದೇವಯ್ಯ ಮಾಗಡಿಬಳಿಯ ಮಂಚನಬೆಲೆ ಬಿಟ್ಟು, ಹೆಂಡತಿ, ಮತ್ತು ಆರು ಮಕ್ಕಳೊಂದಿಗೆ ಬೆಂಗಳೂರಿನ ಶ್ರೀರಾಂಪುರದ ಗೋಪಾಲಸ್ವಾಮಿ ಅಯ್ಯರ್ ಕಾಲನಿಯಲ್ಲಿ ಪುಟ್ಟ